**ದಿನಾಂಕಃ 14.06.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಜಿ.ಎಸ್., ಪ್ರತಿವಾದಿ ಪರ ವಕೀಲರಿಂದ**

2. ನಾನು ಪಿ.ಯು.ಸಿ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಈಗ 73 ವರ್ಷ ವಯಸ್ಸು ಇರುತ್ತದೆ. ನನ್ನ ತಂದೆಯ ಹೆಸರು ಚನ್ನಮಲ್ಲಪ್ಪ.ನಾನು ಈ ದಾವೆಯನ್ನು ಪ್ರತಿವಾದಿ ಹೊನ್ನಮ್ಮನ ವಿರುದ್ಧವಾಗಿ ದಾಖಲಿಸಿರುತ್ತೇನೆ. ಪ್ರತಿವಾದಿ ಹೊನ್ನಮ್ಮನ ಗಂಡನ ಹೆಸರು ಡಿ.ಎಂ.ಭದ್ರಣ್ಣ. ಡಿ.ಎಂ.ಭದ್ರಣ್ಣ ಸ್ವಾತಂತ್ರ್ಯ ಹೋರಾಟಗಾರರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಅಣ್ಣ ಸಹ ಸ್ವಾತಂತ್ರ್ಯ ಹೋರಾಟಗಾರರು ಎಂದು ನುಡಿಯುತ್ತಾರೆ. ಪ್ರತಿವಾದಿ ಹೊನ್ನಮ್ಮ ಮತ್ತು ಅವರ ಗಂಡ ಡಿ.ಎಂ.ಭದ್ರಣ್ಣ ಈಗ ಜೀವಂತ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿ ಹೊನ್ನಮ್ಮ ತೀರಿಕೊಂಡ ನಂತರ ಅವರ ವಾರಸುದಾರರನ್ನು ಪಕ್ಷಗಾರರಾಗಿ ಮಾಡಲಾಗಿರುತ್ತದೆ ಎಂದರೆ ಸರಿ. ಹೊನ್ನಮ್ಮ ಮತ್ತು ಡಿ.ಎಂ.ಭದ್ರಣ್ಣ ಇವರ ಇಬ್ಬರು ಗಂಡು ಮಕ್ಕಳು ಈಗಾಲೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರ ಹೆಣ್ಣು ಮಕ್ಕಳು ಎಲ್ಲರು ಗಂಡನ ಮನೆಯಲ್ಲಿ ಇರುತ್ತಾರೆ ಎಂದರೆ ಸರಿ. ಹಾಲಿ ಪ್ರತಿವಾದಿ ಹೊನ್ನಮ್ಮ ಇವರ ಮನೆಯಲ್ಲಿ ಶೋಭ ಮತ್ತು ಅವರ ಮಕ್ಕಳು ವಾಸಿಸುತ್ತಾರೆ ಎಂದರೆ ಸಾಕ್ಷಿಯು ಇಬ್ಬರು ಗಂಡು ಮಕ್ಕಳ ಹೆಂಡತಿಯರು ಮತ್ತು ಮಕ್ಕಳು ವಾಸಿಸುತ್ತಾರೆ ಎಂದು ನುಡಿಯುತ್ತಾರೆ.

3. ಪ್ರತಿವಾದ ಪತ್ರದ ಸ್ವತ್ತನ್ನು ಹೊನ್ನಮ್ಮ ಇವರು ಸುಬ್ಬರಾವ್ ಬಿನ್ ಕೃಷ್ಣರಾವ್, ಬಿ.ಎಸ್. ಸತ್ಯನಾರಾಯಣರಾವ್, ಬಿ.ಎಸ್.ಭಾನುಮೂರ್ತಿ, ಬಿ.ಎಸ್.ಕೃಷ್ಣಮೂರ್ತಿ, ಬಿ.ಎಸ್.ರಾಮಮೋಹನ್ ಇವರಿಂದ ಈಗ ನೋಡುತ್ತಿರುವ ದಿನಾಂಕ.29.11.1976 ರ ಕ್ರಯ ಪತ್ರದಂತೆ 49,000/- ರೂಪಾಯಿಗಳಿಗೆ ಖರೀದಿಸಿರುತ್ತಾರೆ ಎಂದರೆ ಸರಿ. ಪ್ರತಿವಾದ ಪತ್ರದ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಹೊನ್ನಮ್ಮ ಅದರಲ್ಲಿ ಬಾಡಿಗೆದಾರರಾಗಿ ವಾಸವಾಗಿದ್ದರು ಎಂದರೆ ಸರಿ. ಪ್ರತಿವಾದ ಪತ್ರ ಸ್ವತ್ತನ್ನು ಹೊನ್ನಮ್ಮ ಖರೀದಿಸುವ ಕಾಲಕ್ಕೆ ಅದರಲ್ಲಿ ಮೇನ್ ಹೌಸ್ ಮತ್ತು ಔಟ್ ಹೌಸ್ ಇತ್ತು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಪೂರ್ವ-ಪಶ್ಚಿಮ 100 ಅಡಿ, ಉತ್ತರ-ದಕ್ಷಿಣ 120 ಅಡಿ ಎಂದು ಕ್ರಯ ಪತ್ರದಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಪೂರ್ವಕ್ಕೆ ತಿಮ್ಮಾರೆಡ್ಡಿ ಮನೆ ಮತ್ತು ಕನ್ಸರ್ವೆನ್ಸಿ ಎಂದು ಕ್ರಯ ಪತ್ರದಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿಯು ಬರೆದುಕೊಂಡಿರುಬಹು ಎಂದು ನುಡಿಯುತ್ತಾರೆ. ಸಾಕ್ಷಿಯು ಪುನಃ ಮುಂದುವರೆದು ಪೂರ್ವ ದಿಕ್ಕಿಗೆ ಸ್ವಲ್ಪ ಕನ್ಸರ್ವೆನ್ಸಿ ಬರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರವಾಗಿ ಕನ್ಸರ್ವೆನ್ಸಿ 9-10 ಅಡಿ ಇರುತ್ತದೆ.

4. ಪಶ್ಚಿಮ ದಿಕ್ಕಿಗೆ ರಸ್ತೆ ಇರುತ್ತದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಎಂ.ಎ.ವಿಜೇಂದ್ರರಾವ್ ರವರ ಮನೆ ಇರುತ್ತದೆ ಎಂದರೆ ಸರಿ. ದಕ್ಷಿಣ ದಿಕ್ಕಿಗೆ ಸರ್ವೀಸ್ ರಸ್ತೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯವರು ಪೂರ್ವ-ಪಶ್ಚಿಮ 100 ಅಡಿ, ಉತ್ತರ-ದಕ್ಷಿಣ 120 ಅಡಿ ಕ್ಷೇತ್ರದಲ್ಲಿ ಮೇನ್ ಹೌಸ್, ಔಟ್ ಹೌಸ್, ಹಾಲಿ ಭಾರತೀಯ ಸ್ಟೇಟ್ ಬ್ಯಾಂಕ್ ಕಟ್ಟಡ ಮತ್ತು ಖಾಲಿ ಜಾಗ ಒಳಗೊಂಡ ವಿಸ್ತೀರ್ಣದಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸಾಕ್ಷಿಯು ಪೂರ್ವ-ಪಶ್ಚಿಮ 98 ಮುಕ್ಕಾಲು ಅಡಿ, ಉತ್ತರ-ದಕ್ಷಿಣ 120 ಅಡಿ ಕ್ಷೇತ್ರದಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಪೂರ್ವ-ಪಶ್ಚಿಮ 98 ಮುಕ್ಕಾಲು ಅಡಿ, ಉತ್ತರ-ದಕ್ಷಿಣ 120 ಅಡಿ ಕ್ಷೇತ್ರದಲ್ಲಿ ಪ್ರತಿವಾದಿಯವರು ಸ್ವಾಧೀನಾನುಭವದಲ್ಲಿರುತ್ತಾರೆ ಅಂತ ರುಜುವಾತುಪಡಿಸಲು ನಾನು ನಗರಸಭೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಪೂರ್ವ-ಪಶ್ಚಿಮ 98 ಮುಕ್ಕಾಲು ಅಡಿ, ಉತ್ತರ-ದಕ್ಷಿಣ 120 ಅಡಿ ಕ್ಷೇತ್ರದಲ್ಲಿ ಪ್ರತಿವಾದಿಯವರು ಸ್ವಾಧೀನಾನುಭವದಲ್ಲಿರುತ್ತಾರೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಪೂರ್ವ-ಪಶ್ಚಿಮ 100 ಅಡಿ, ಉತ್ತರ-ದಕ್ಷಿಣ 120 ಅಡಿ ಜಾಗದಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

5. ಪ್ರತಿವಾದಿಯರ ಮನೆಯ ಪೂರ್ವ ದಿಕ್ಕಿಗೆ ಕನ್ಸರ್ವೆನ್ಸಿ ಜಾಗದಲ್ಲಿ ಪೂರ್ವ-ಪಶ್ಚಿಮ 100 ಅಡಿ ಜಾಗದಲ್ಲಿ 1 ವರೆ ಅಡಿಗಳನ್ನು ಬಿಟ್ಟು ಹದ್ದು ಬಸ್ತು ಕಲ್ಲುಬಂಡೆಗಳನ್ನು ನೆಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1969 ನೇ ಇಸವಿಯಲ್ಲಿ ನಾನು ಖರೀದಿಸಿದಾಗ ಕಲ್ಲುಬಂಡೆಗಳನ್ನು ನೆಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 1969 ನೇ ಇಸವಿಯಲ್ಲಿ ನಾನು ಖರೀದಿಸಿದಾಗ ಕಲ್ಲುಬಂಡೆಗಳನ್ನು ನೆಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1969 ನೇ ಇಸವಿಯಲ್ಲಿ ನಾನು ದಾವಾ ಸ್ವತ್ತಿಗೆ ಮಾಲೀಕನಾಗಿರಲಿಲ್ಲ ಎಂದರೆ ಸರಿಯಲ್ಲ. 1969 ನೇ ಇಸವಿಯಲ್ಲಿ ನಾನು ಪ್ರತಿವಾದಿಯರ ಆಸ್ತಿಯ ಪೂರ್ವ ದಿಕ್ಕಿನ ಜಾಗವನ್ನು ಖರೀದಿಸಿರುತ್ತೇನೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.3 ರಿಂದ 6 ರಲ್ಲಿ ಕಾಣಿಸಿರುವಂತಹ ಕಲ್ಲು ಬಂಡೆಗಳು ಪ್ರತಿವಾದಿಯರು ಹದ್ದು ಬಸ್ತಿಗೋಸ್ಕರ ನೆಟ್ಟಿರುತ್ತಾರೆ ಎಂದರೆ ಸರಿಯಲ್ಲ. ಬಂಡೆಗಳನ್ನು ನಾನು ಕಿತ್ತು ವಾದಿಯರ ಜಾಗದಲ್ಲಿ ಒತ್ತುವರಿ ಮಾಡಿ ಈಗ ನೋಡುತ್ತಿರುವ ನಿ.ಪಿ.3 ರಿಂದ 6 ಪ್ರಕಾರ ಗೋಡೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರೇ ಬಂಡೆಯನ್ನು ಕಿತ್ತು ಗೋಡೆ ಕಟ್ಟಲು ಪ್ರಯತ್ನಪಟ್ಟಾಗ ನಾನು ಕೋರ್ಟಿಗೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು ಬಂಡೆಯನ್ನು ಕಿತ್ತು ಗೋಡೆ ಕಟ್ಟಲು ಪ್ರಯತ್ನಪಟ್ಟಾಗ ನಾನು ಕೋರ್ಟಿಗೆ ಬಂದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಈಗ ನೋಡುತ್ತಿರುವ ನಿ.ಪಿ.3 ಮತ್ತು 5 ರಲ್ಲಿ ನೆಟ್ಟಿರುವ ಬಿದಿರು ಕಂಬಗಳನ್ನು ಕೆಲಸ ಮಾಡುವಾಗ ನಾನು ನೆಟ್ಟಿರುತ್ತೇನೆ. ಪ್ರತಿವಾದಿಯವರ ಜಾಗದಲ್ಲಿ ಅತಿಕ್ರಮಣ ಮಾಡಿ ಬಂಡೆಗಳನ್ನು ಹೊಡೆದು ಹಾಕಿ ಬಿದಿರು ಕಂಬಗಳನ್ನು ನೆಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗ ನೋಡುತ್ತಿರುವ ನಿ.ಪಿ.5 ರಲ್ಲಿ ಬಂಡೆಗಳು ಹೊಡೆದಿದ್ದು ಅವುಗಳನ್ನು ನಾನೇ ಹೊಡೆದಿರುತ್ತೇನೆ ಎಂದರೆ ಸಾಕ್ಷಿಯು ಅವರೇ ಕಾಂಪೋಂಡ್ ಗೋಡೆ ಕಟ್ಟುವಾಗ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರ ಜಾಗಕ್ಕೆ ಹೋಗಿ ಅವರಿಗೆ ಸೇರಿದ ಬಂಡೆಗಳನ್ನು ಹೊಡೆದು ಅವರಿಗೆ ತೊಂದರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಪ್ರತಿವಾದಿಯವರಿಗೆ ತೊಂದರೆ ಕೊಟ್ಟು ಉದ್ದೇಶ ಪೂರ್ವಕವಾಗಿ ನಾನೇ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

7. ಪ್ರತಿವಾದಿಯವರು ನನ್ನ ವಿರುದ್ಧ ಈ ದಾವೆಯನ್ನು ಪ್ರತಿದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದ ಪತ್ರದ ಸ್ವತ್ತಿಗೆ ಪ್ರತಿವಾದಿಯವರೇ ಮಾಲೀಕರು, ಹಕ್ಕುದಾರರು ಮತ್ತು ಸ್ವಾಧೀನದಾರರು ಎಂದರೆ ಸಾಕ್ಷಿಯು ಪೂರ್ವ-ಪಶ್ಚಿಮ 98 ಮುಕ್ಕಾಲು ಅಡಿ, ಉತ್ತರ-ದಕ್ಷಿಣ 120 ಅಡಿ ಆಸ್ತಿಗೆ ಮಾತ್ರ ಇದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು ಕೇವಲ ಪೂರ್ವ-ಪಶ್ಚಿಮ 98 ಮುಕ್ಕಾಲು ಅಡಿ ಕ್ಷೇತ್ರಕ್ಕೆ ಮಾತ್ರ ಹಕ್ಕುದಾರರು ಅಂತ ನಾನು ಸುಳ್ಳು ಹೇಳುತ್ತಿದ್ದು ನೈಜ್ಯವಾಗಿ ಅವರು ಪೂರ್ವ-ಪಶ್ಚಿಮ 100 ಅಡಿ ಕ್ಷೇತ್ರಕ್ಕೆ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಸ್ವತ್ತಿನ ಪೂರ್ವ ದಿಕ್ಕಿನ ಕಡೆ ತಮ್ಮ 100 ಅಡಿ ಜಾಗದಲ್ಲಿ 1 ವರೆ ಅಡಿ ಜಾಗವನ್ನು ಬಿಟ್ಟು ಕಲ್ಲು ಬಂಡೆಗಳನ್ನು ನೆಡಲಾಗಿರುತ್ತದೆ ಎಂದರೆ ಸರಿಯಲ್ಲ. ಕಲ್ಲು ಬಂಡೆ ನೆಟ್ಟಿರುವ ಜಾಗವನ್ನು ಪ್ರತಿವಾದಿಯವರು ಕನ್ಸ್ರವೆನ್ಸಿ ಆಗಿ ಉಪಯೋಗಿಸುತ್ತಾ ಬಂದಿರುತ್ತಾರೆ ಸಾಕ್ಷಿಯು ಮೊದಲಿನಿಂದ ನಾನು ಕನ್ಸ್ರವೆನ್ಸಿ ಎಂದು ಉಪಯೋಗಿಸುತ್ತಾ ಬಂದಿರುತ್ತೇನೆ ಎಂದು ನುಡಿಯುತ್ತಾರೆ.

**(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.